ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 10-12-1992.

# *ಪೂರ್ವಜ ಮತ್ತು ಪೂಜ್ಯರು ಎಂಬ ಸ್ಮೃತಿಯಲ್ಲಿದ್ದು ಸರ್ವರ ಅಲೌಕಿಕ ಪಾಲನೆಯನ್ನು ಮಾಡಿ*

(पूर्वज और पूज्य की स्मृति में रहकर सर्व की अलौकिक पालना करो)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

- ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.
- ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.
- ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.
- ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ತನ್ನ ಆತ್ಮಿಕ ಸಂಘ ಸೇವಾಧಾರರಾದ ಮಕ್ಕಳೊಂದಿಗೆ ಅವ್ಯಕ್ತ ಬಾಪ್‌ದಾದಾ ಮಾತನಾಡುತ್ತಿದ್ದಾರೆ.**

ಇಂದು ವಿಶ್ವರಚಯಿತ ತಂದೆ ತನ್ನ ಶ್ರೇಷ್ಠ ರಚನೆಯನ್ನು ನೋಡುತ್ತಿದ್ದಾರೆ. ಎಲ್ಲಾ ರಚನೆಗಳಲ್ಲಿ ಶ್ರೇಷ್ಠ ರಚನೆ ಬ್ರಾಹ್ಮಣಾತ್ಮರಾದ ತಾವುಗಳೇ ಆಗಿದ್ದೀರಿ. ಏಕೆಂದರೆ ತಾವು ವಿಶ್ವದ ಪೂರ್ವಜ ಆತ್ಮರಾಗಿದ್ದೀರಿ. ಪೂರ್ವಜರು ಮತ್ತು ಪೂಜ್ಯಾತ್ಮರು ಕೂಡಾ! ಈ ಕಲ್ಪವೃಕ್ಷದ ಬುನಾದಿ ಅರ್ಥಾತ್ ಬೇರುಗಳು ಬ್ರಾಹ್ಮಣತ್ಮರಾದ ನೀವೇ. ಈ ವೃಕ್ಷಕ್ಕೆ ಮೂಲ ಆಧಾರವಾದ ಕಾಂಡ ಕೂಡ ನೀವೇ ಆದ್ದರಿಂದ ನೀವು ಸರ್ವಾತ್ಮರಿಗಿಂತ ಪೂರ್ವಜರು. ಈ ಸೃಷ್ಟಿಚಕ್ರದಲ್ಲಿ ಯಾರಾದರೇ ವಿಶೇಷ ಧರ್ಮ ಪಿತರಾಗಿ ಕರೆಯಲ್ಪಡುತ್ತಿದ್ದಾರೆಯೋ ಆ ಧರ್ಮತ್ಮರಿಗೆ ಕೂಡ ಪೂರ್ವಜರಾದ ನಿಮ್ಮಿಂದಲೇ ತಂದೆಯ ಸಂದೇಶ ಲಭಿಸುತ್ತದೆ. ಅದರ ಆಧಾರದಿಂದಲೇ ಸಮಯ ಪ್ರಮಾಣವಾಗಿ ಆ ಧರ್ಮಪಿತರು ತಮ್ಮ ಧರ್ಮಾತ್ಮರಿಗೆ

ಸಂದೇಶ ಕೊಡಲು ನಿಮಿತ್ತವಾಗುತ್ತಾರೆ. ಹೇಗಾದರೆ ಬ್ರಹ್ಮಾಬಾಬಾ ಗ್ರೇಟ್ ಗ್ರೇಟ್ ಗ್ರಾಂಡ್ ಫಾದರ್ (ತಾತರಿಗೆ ತಾತ) ಅದೇ ರೀತಿ ಬ್ರಹ್ಮನೊಂದಿಗೆ ಬ್ರಹ್ಮಣಾತ್ಮರಾದ ನೀವು ಕೂಡ ಸಹಯೋಗಿಗಳು ಆದ್ದರಿಂದ ನೀವು ಪೂರ್ವಜರೆಂದು ಕರೆಯಲ್ಪಡುತ್ತೀರಿ.

ಪೂರ್ವಜರಿಗೆ ಪ್ರತ್ಯಕ್ಷವಾಗಿ ಆದರೂ ಪರೋಕ್ಷವಾಗಿ ಆದರೂ ಸರ್ವಾತ್ಮರೊಂದಿಗೆ ಸಂಬಂಧವಿರುತ್ತದೆ. ಹೇಗೆ ವೃಕ್ಷದ ಸರ್ವ ಕೊಂಬೆ-ರೆಂಬೆಗಳ ಸಂಬಂಧ ಬೇರಿನೊಂದಿಗೆ ಅಥವಾ ಕಾಂಡದೊಂದಿಗೆ ಅವಶ್ಯವಾಗಿರುತ್ತದೆ. ಭಲೆ ಯಾವುದೇ ಧರ್ಮದ ಚಿಕ್ಕ-ಅಥವಾ ದೊಡ್ಡ ಕೊಂಬೆ-ರೆಂಬೆ ಇರಲಿ ಸಂಬಂಧ ಸ್ವತಃವಾಗಿ ಇರುತ್ತದೆ. ಅಂದಾಗ ತಾವು ಪೂರ್ವಜರಾದಿರಲ್ಲವೇ. ಅರ್ಧಕಲ್ಪ ರಾಜ್ಯಾಧಿಕಾರಿಯಾದ ನಂತರ ಪೂಜ್ಯಾತ್ಮರಾಗುತ್ತೀರಿ. ಪೂಜ್ಯರಾಗುವುದರಲ್ಲಿ ತಾವಾತ್ಮರಂತಹ ಪೂಜೆ ಯಾವುದೇ ಧರ್ಮಾತ್ಮರಿಗೆ ಆಗುವುದಿಲ್ಲ. ಪೂಜ್ಯಾತ್ಮರ ಪೂಜೆಯು ವಿಧಿಪೂರ್ವಕವಾಗಿ ಆಗುತ್ತದೆ. ಈ ರೀತಿಯ ಪೂಜೆ ಯಾವುದೇ ಧರ್ಮಪಿತರರಿಗೂ ಆಗುವುದಿಲ್ಲ. ತಂದೆಯ ಕಾರ್ಯದಲ್ಲಿ ಯಾವ ಬ್ರಾಹ್ಮಣರು ಜೊತೆಗಾರರಾಗುತ್ತೀರೋ ಅವರದೂ ಸಹ ದೇವತೆ ಅಥವಾ ದೇವಿಯ ರೂಪದಲ್ಲಿ ವಿಧಿ ಪೂರ್ವಕ ಪೂಜೆ ಆಗುತ್ತದೆ. ಯಾವುದೇ ಧರ್ಮಪಿತರ ಜೊತೆಗಾರರು ಧರ್ಮವನ್ನು ಪಾಲನೆ ಮಾಡುವಂತಹ ಆತ್ಮರದು ವಿಧಿಪೂರ್ವಕ ಪೂಜೆ ಆಗುವುದಿಲ್ಲ. ಮಹಿಮೆಯಾಗುತ್ತದೆ. ಅವರ ಪ್ರತಿಮೆಗಳನ್ನು ಮಾಡುತ್ತಾರೆ ಆದರೆ ನಿಮ್ಮಂತಹ ಪೂಜ್ಯರಾಗುವುದಿಲ್ಲ.

ತಮ್ಮದು ಮಹಿಮೆ (ಗಾಯನ)ವೂ ಆಗುತ್ತದೆ ಮತ್ತು ಪೂಜೆಯೂ ಸಹ ಆಗುತ್ತದೆ. ಗಾಯನದ ವಿಧಿಯೂ ಸಹ ತಾವು ಬ್ರಾಹ್ಮಣ ಆತ್ಮರದು ಎಲ್ಲದಕ್ಕಿಂತ ಭಿನ್ನವಾಗಿರುತ್ತದೆ. ಹೇಗೆ ತಾವು ದೇವತೆಗಳ ಗಾಯನ ಬಹಳ ಸುಂದರ ರೂಪದಿಂದ. ಕೀರ್ತನೆಯ ರೂಪದಿಂದ ಆಗುತ್ತದೆ. ಅತೀತವಾಗಿ ಇರುತ್ತದೆ ಹಾಗೆಯೇ ಅನ್ಯ ಆತ್ಮರ ಗಾಯನ ಈ ಪ್ರಕಾರವಾಗಿ ಆಗುವುದಿಲ್ಲ. ಈ ರೀತಿ ಏಕಾಗುತ್ತದೆ? ಏಕೆಂದರೆ ತಾವು ಶ್ರೇಷ್ಠ ರಚನೆ, ಪೂರ್ವಜ ಮತ್ತು ಪೂಜ್ಯಾತ್ಮರಾಗಿದ್ದೀರಿ. ತಾವು ಆದಿ ಆತ್ಮರು ಬ್ರಾಹ್ಮಣರಾಗಿದ್ದೀರಿ ಏಕೆಂದರೆ ಆದಿ ದೇವ್ ಬ್ರಹ್ಮಾರವರ ಸಹಯೋಗಿ ಶ್ರೇಷ್ಠ ಕಾರ್ಯದಲ್ಲಿ ನಿಮಿತ್ತರಾಗಿದ್ದೀರಿ. ಅನಾದಿ ರೂಪದಲ್ಲಿಯೂ ಸಹ ಪರಮಾತ್ಮನ ಅತೀ ಸಮೀಪ ಇರುವಂತಹವರಾಗಿದ್ದೀರಿ. ಆತ್ಮನ ಯಾವ ಚಿತ್ರವನ್ನು ತೋರಿಸುತ್ತೀರೋ ಅದರಲ್ಲಿ ಎಲ್ಲರಿಗಿಂತ ಸಮೀಪ ಇರುವ ಆತ್ಮರಾಗಿ ಯಾರನ್ನು ತೋರಿಸಲಾಗುತ್ತದೆ? ಅದರಲ್ಲಿ ತಾವಿದ್ದೀರಿ, ಅಂದಾಗ ಅನಾದಿ ರೂಪದಲ್ಲಿಯೂ ಸಹ ಅತಿ ಸಮೀಪರು, ಇದನ್ನೇ ಡಬಲ್ ವಿದೇಶಿಗಳು ಡಿಯರೆಸ್ಟ್ ಎಂದು ಹೇಳುತ್ತಾರೆ. ಅವರಿಗೆ ಅತೀ ಸಮೀಪರು ಮತ್ತು ಅತೀ ಪ್ರಿಯರೆಂದು ಹೇಳುತ್ತಾರೆ.

ಪೂರ್ವಜರ ಕೆಲಸವೇನಾಗಿರುತ್ತದೆ? ಪೂರ್ವಜರು ಎಲ್ಲರ ಪಾಲನೆ ಮಾಡುತ್ತಾರೆ. ಹಿರಿಯರ ಪಾಲನೆಯು ಪ್ರಸಿದ್ಧವಾಗಿರುತ್ತದೆ. ಅಂದಾಗ ತಾವೆಲ್ಲರೂ ಪೂರ್ವಜ ಆತ್ಮರು, ಸರ್ವ ಆತ್ಮರ ಪಾಲನೆಯನ್ನು ಮಾಡುತ್ತಿದ್ದೀರಲ್ಲವೇ ಅಥವಾ ಕೇವಲ ತಮ್ಮಲ್ಲಿ ಬರುವಂತಹ ವಿದ್ಯಾರ್ಥಿಗಳ ಪಾಲನೆಯನ್ನು ಮಾಡುತ್ತಿದ್ದೀರೋ ಅಥವಾ ಸಂಬಂಧ ಸಂಪರ್ಕದಲ್ಲಿ ಇರುವವರ ಪಾಲನೆಯನ್ನು ಮಾಡುತ್ತಿದ್ದೀರೋ ಅಥವಾ ಇಡೀ ವಿಶ್ವದ ಆತ್ಮರ ಪೂರ್ವಜರಾಗಿದ್ದೀರೋ ಅಥವಾ ಕೇವಲ ಬ್ರಾಹ್ಮಣ ಅತ್ಮರ ಪೂರ್ವಜರೋ? ಮರದ ಬೇರು ಅಥವಾ ಕಾಂಡವು ಇಡೀ ವೃಕ್ಷಕ್ಕೆ ಇರುತ್ತದೆಯೇ ಅಥವಾ ತನ್ನ ಬೇರಿಗಷ್ಟೇ

ಸೀಮಿತವಾಗಿರುತ್ತದೋ? ಇಡೀ ಕೊಂಬೆ, ರೆಂಬೆಗಳೊಂದಿಗೆ ಸೇರಿರುತ್ತದೆ. ಬೇರು ಅಥವಾ ಕಾಂಡದ ಮೂಲಕ ಇಡೀ ವೃಕ್ಷಕ್ಕೆ ಎಲೆ-ಎಲೆಗೆ ನೀರು ಸಿಗುತ್ತದೆಯೋ ಅಥವಾ ಕೇವಲ ಕೆಲವು ಕೊಂಬೆ ರೆಂಬೆಗೆ ನೀರು ಸಿಗುತ್ತದೆಯೋ? ಎಲ್ಲದಕ್ಕೂ ಸಿಗುತ್ತದೆ ಯಲ್ಲವೇ? ಕೊನೆಯಲ್ಲಿರುವ ಎಲೆಗೂ ಸಹ ಸಿಗುತ್ತದೆ. ಇಷ್ಟೊಂದು ಬೇಹದ್ದಿನ ನಶೆಯಿದೆಯಲ್ಲವೇ ಅಥವಾ ಬೇಹದ್ದಿನಿಂದ ಹದ್ದಿನಲ್ಲೂ ಬಂದುಬಿಡುತ್ತೀರೋ?. ಎಷ್ಟೊಂದು ಸೇವೆ ಮಾಡಬೇಕು. ಪ್ರತಿಯೊಂದು ಎಲೆಗೂ ನೀರನ್ನು ಕೊಡಬೇಕು ಅರ್ಥಾಥ್ ಸರ್ವಾತ್ಮರ ಪಾಲನೆಯನ್ನು ಮಾಡಲು ನಿಮಿತ್ತರಾಗಿದ್ದೀರಿ.

ಯಾವುದೇ ಧರ್ಮಾತ್ಮರನ್ನು ಭೇಟಿ ಮಾಡಿದಾಗ ಅಥವಾ ನೋಡಿದಾಗ "ಹೇ ಪೂರ್ವಜ 'ಅತ್ಯರೇ! ಎಲ್ಲಾ ಅತ್ಮರು ನಮ್ಮ ಗ್ರೇಟ್-ಗ್ರೇಟ್ ಗ್ರಾಂಡ್ ಫಾದರಿನ ವಂಶಸ್ತರಾಗಿದ್ದಾರೆ ಎಂಬ ಅನುಭವ ಮಾಡುತ್ತೀರಾ? ತಾವು ಬ್ರಾಹ್ಮಣರೂ ಸಹ ಮಾಸ್ಟರ್ ಗ್ರೇಟ್-ಗ್ರೇಟ್ ಗ್ರಾಂಡ್ ಫಾದರ್ ಅರ್ಥಾತ್ ಪೂರ್ವಜರಾಗಿದ್ದೀರಿ. ಇವರೆಲ್ಲರೂ ನಿಮ್ಮವರೇ? "ಅಥವಾ ಬ್ರಾಹ್ಮಣ ಆತ್ಮರು ಮಾತ್ರ ನಿಮ್ಮವರಾ? ಸಹೋದರ-ಸಹೋದರರರೆಂದು ಹೇಳುತ್ತಿದ್ದೀರಿ ಎಂದರೆ ತಾವು ಪೂರ್ವಜರು ದೊಡ್ಡ ಸಹೋದರರು ಅರ್ಥಾತ್ ತಂದೆಯ ಸಮಾನ. ಈ ಸ್ಮೃತಿಯನ್ನೇ ಪ್ರತ್ಯಕ್ಷ ಜೀವನದಲ್ಲಿ ಅನುಭವ ಮಾಡಬೇಕು ಮತ್ತು ಮಾಡಿಸಬೇಕು. ತಾವೆಲ್ಲ ಪೂರ್ವಜ ಆತ್ಮರ ಪಾಲನೆಯ ಸ್ವರೂಪವೇನು? ಲೌಕಿಕ ಜೀವನದಲ್ಲಿಯೂ ಸಹ ಪಾಲನೆಯ ಆಧಾರ ಏನಾಗಿರುತ್ತದೆ? ಪಾಲನೆ ಮಾಡುವುದು ಅರ್ಥಾತ್ ಯಾರನ್ನಾದರೂ ಶಕ್ತಿಶಾಲಿಯನ್ನಾಗಿ ಮಾಡುವುದು. **ಯಾವುದೇ ವಿಧಿಯಿಂದ ಸಾಧನದಿಂದ ಪಾಲನೆಯ ಮೂಲಕ ಶಕ್ತಿಶಾಲಿಯನ್ನಾಗಿ ಮಾಡುತ್ತಾರೆ. ಭಲೆ ಭೋಜನದ ಮೂಲಕ ಆಗಿರಬಹುದು ಅಥವಾ ವಿದ್ಯಾಭ್ಯಾಸದ ಮೂಲಕವೂ ಆಗಿರಬಹುದು. ಪಾಲನೆಯ ಪ್ರತ್ಯಕ್ಷ ಸ್ವರೂಪ ಆತ್ಮನಲ್ಲಿ ಶಕ್ತಿ. ಶರೀರದಲ್ಲಿ ಶಕ್ತಿ ಬರುತ್ತದೆ. ಅಂದಾಗ ಪಾಲನೆಯ ಪ್ರತ್ಯಕ್ಷ ಸ್ವರೂಪ ಶಕ್ತಿಶಾಲಿ ಮಾಡುವುದಾಗಿದೆ.**

**ತಾವು ಪೂರ್ವಜ ಆತ್ಮರ ಪಾಲನೆಯ ವಿಧಿ ಏನಾಗಿದೆ? ಅಲೌಕಿಕ ಪಾಲನೆಯ ಸ್ವರೂಪ ಸ್ವಯಂನಲ್ಲಿ ತಂದೆಯ ಮೂಲಕ ಪ್ರಾಪ್ತಿಯಾದ ಸರ್ವ ಶಕ್ತಿಗಳನ್ನು ಅನ್ಯ ಆತ್ಮರಲ್ಲಿ ತುಂಬುವುದಾಗಿದೆ. ಸ್ವಯಂನಲ್ಲಿ ಸರ್ವ ಶಕ್ತಿಗಳನ್ನು ತುಂಬುವುದು. ಯಾವ ಅತ್ಮನಿಗೆ ಯಾವ ಶಕ್ತಿಯ ಅವಶ್ಯಕತೆಯಿದೆಯೋ ಅವರಿಗೆ ಆ ಸಮಯ ಆ ಶಕ್ತಿಯ ಮೂಲಕ ಪಾಲನೆ ಮಾಡುವುದು.** ಈ ರೀತಿ ಪಾಲನೆ ಮಾಡಲು ಬರುತ್ತದೆಯೇ? ಪೂರ್ವಜರಂತೂ ಆಗಿದ್ದೀರಲ್ಲವೇ? ಎಲ್ಲರೂ ಪೂರ್ವಜ ಅತ್ಮರಾಗಿದ್ದೀರೋ ಅಥವಾ ಚಿಕ್ಕವರಾಗಿದ್ದೀರೋ? ಎಲ್ಲರೂ ಪೂರ್ವಜರೋ ಅಥವಾ ಕೆಲವೇ ಕೆಲವು ವಿಶೇಷ ಆತ್ಮರೋ? ಪೂರ್ವಜರಿಗೆ ಪಾಲನೆ ಮಾಡಲು ಬರುತ್ತದೆಯಲ್ಲವೇ? ಕೇವಲ ಸೆಂಟರನ್ನೇ ಪಾಲನೆ ಮಾಡುತ್ತೀರೋ ಅಥವಾ ಇಡೀ ವಿಶ್ವದ ಅತ್ಮರನ್ನು ಪಾಲನೆ ಮಾಡುತ್ತೀರೋ?

ಕೇವಲ ಪ್ರವೃತ್ತಿಯನ್ನು ಪಾಲನೆ ಮಾಡ ತ್ತೀರೋ ಅಥವಾ ವಿಶ್ವವನ್ನೇ ಪಾಲನೆ ಮಾಡುತ್ತೀರೋ? ವರ್ತಮಾನ ಸಮಯ ತಾವು ಪೂರ್ವಜ ಆತ್ಮರ ಪಾಲನೆಯ ಅವಶ್ಯಕತೆ ಸರ್ವಾತ್ಮರಿಗೆ ಇದೆ. ಸಮಾಚಾರವನ್ನಂತೂ ಎಲ್ಲರೂ ಬಹಳ ಇಷ್ಟುಕರಾಗಿ ಏನಾಯಿತೆಂದು ಕೇಳುತ್ತೀರಿ? (ಅಯೋಧ್ಯೆಯ ಘಟನೆಯ ನಂತರ ಕೆಲವು ಸ್ಥಾನಗಳಲ್ಲಿ ಹಿಂಸೆಗಳಾಯಿತು) **ಪೂರ್ವಜ ಅತ್ಮರು ಸಮಾಚಾರ ಕೇಳಿದ ನಂತರ ಸರ್ವರ ಪಾಲನೆಯನ್ನು ಮಾಡಿದ್ದೀರಾ? ಅಶಾಂತಿಯ ಸಮಯದಲ್ಲಿ ತಾವು ಪೂರ್ವಜ ಆತ್ಮರ ವಿಶೇಷಕಾರ್ಯ ಸ್ವತಃವಾಗಿಯೇ ಆಗುತ್ತದೆ. ಹೇ ಪೂರ್ವಜರೇ! ತಮ್ಮ ಪಾಲನೆಯ ಸೇವೆಯಲ್ಲಿ**

**ತೊಡಗಿರಿ. ಹೇಗೆ ಅಶಾಂತಿಯ ಸಮಯದಲ್ಲಿ ವಿಶೇಷ ರಕ್ಷಣ ಧಳದವರು, ಸೈನಿಕರು ಅಶಾಂತಿಯನ್ನು ಶಾಂತ ಮಾಡುವುದು ನಮ್ಮ ಕರ್ತವ್ಯವೆಂದು ತಿಳಿಯುತ್ತಾರೆ. ಆದೇಶದ ಮೂಲಕ ಅಲ್ಲಿಗೆ ತಲುಪಿಬಿಡುತ್ತಾರೆ. ಅಂತಹ ಸಮಯದಲ್ಲಿ ವಿಶೇಷ ಗಮನದಿಂದ ತಮ್ಮ ಸೇವೆಗೋಸ್ಕರ ಸಿದ್ಧರಾಗಿಬಿಡುತ್ತಾರೆ. ತಾವೆಲ್ಲರೂ ಏರುಪೇರಿನ ಸಮಾಚಾರವನ್ನಂತೂ ಕೇಳಿದಿರಿ ಆದರೆ ಸೇವೆಯಲ್ಲಿ ತೊಡಗಿದ್ದೀರಾ? ಅಥವಾ ಕೇಳುವುದರಲ್ಲಿಯೇ ಆನಂದ ಪಟ್ಟಿದ್ದೀರೋ ತಮ್ಮ ಪೂರ್ವಜ ಸ್ಥಿತಿ ಸ್ಮೃತಿಯಲ್ಲಿ ಬಂದಿತೇ? ಎಲ್ಲಾ ಅತ್ಮರನ್ನು ಶಾಂತಿಯ ಶಕ್ತಿಯಿಂದ ಪಾಲನೆ ಮಾಡಿದಿರಾ? ಅಥವಾ ಇಲ್ಲಿ ಹೀಗಾಯಿತು ಅಲ್ಲಿ ಹಾಗಾಯಿತು ಎಂಬುದನ್ನೇ ಯೋಚಿಸುತ್ತಿದ್ದೀರಾ? ವಿಶೇಷ ಅತ್ಮರ ಸೇವೆ ಇಂತಹ ಸಂದರ್ಭದಲ್ಲಿ ಅತೀ ಅವಶ್ಯಕವಾಗಿದೆ. ತಮ್ಮ ವೃತ್ತಿಯ ಮೂಲಕ ಮನಸಾ ಶಕ್ತಿಯ ಮೂಲಕ ವಿಶೇಷ ಸೇವೆಯನ್ನು ಮಾಡಿದ್ದೀರಾ ಅಥವಾ ವಿಧಿ ಪೂರ್ವಕ ಸ್ಮೃತಿಯಲ್ಲಿ ಇರುತ್ತೀರೋ, ಸೇವೆ ಮಾಡುತ್ತೀರೋ ಅದೇ ರೀತಿ ಮಾಡಿದಿರಾ? ತಾವು ಆತ್ಮಿಕ ಸಮಾಜ ಸೇವಕರಾಗಿದ್ದೀರಿ ಅಂದಾಗ ಆತ್ಮೀಕ ಸಮಾಜ ಸೇವಕರು ತಮ್ಮ ನಿಶೇಷ ಹೆಚ್ಚಿನ ರೂಪದಲ್ಲಿನ ಸೇವೆಯನ್ನು ಮಾಡಿದ್ದೀರಾ?** ಇಷ್ಟೊಂದು ತಮ್ಮ ಜವಾಬ್ದಾರಿಯಿದೆ ಎಂದು ತಿಳಿದಿದ್ದೀರಾ ಅಥವಾ ಪ್ರೋಗ್ರಾಂ ಕೊಟ್ಟರೆ ಮಾತ್ರ ಮಾಡುತ್ತೀರಾ? ಇಂತಹ ಸಮಯದಲ್ಲಿ ಸೆಕೆಂಡಿನಲ್ಲಿ ತಮ್ಮ ಸೇವೆಗಾಗಿ ಸಿದ್ಧರಾಗಿ ಬಿಡಬೇಕು. ಇದೇ ತಮ್ಮ ಪೂರ್ವಜ ಆತ್ಮರ ಜವಾಬ್ದಾರಿಯಾಗಿದೆ.

ಈಗಲೂ ಸಹ ವಿಶ್ವದಲ್ಲಿ ಏರು-ಪೇರಿದೆ. ಈ ಏರು-ಪೇರಂತೂ ಸಮಯ ಪ್ರತಿ ಸಮಯ ಹೆಚ್ಚುವುದಿದೆ. ತಾವು ಅತ್ಮರ ಕರ್ತವ್ಯ - ಇಂತಹ ಸಮಯದಲ್ಲಿ ಆತ್ಮರಲ್ಲಿ ವಿಶೇಷ ಶಾಂತಿಯ, ಸಹನಾ ಶಕ್ತಿಯ ಸಾಹಸ(ಧೈರ್ಯ)ವನ್ನು ತುಂಬಬೇಕು. ಲೈಟ್ ಹೌಸ್, ಮೈಟ್ ಹೌಸ್ ಆಗಿ ಎಲ್ಲರಿಗೂ ಶಾಂತಿಯ ಲೈಟನ್ನು ಕೊಡಬೇಕು. ಏನು ಮಾಡಬೇಕೆಂದು ತಿಳಿಯಿತೇ? ಈಗ ತಮ್ಮ ಜವಾಬ್ದಾರಿ ಅಥವಾ ಕರ್ತವ್ಯವನ್ನು ಇನ್ನೂ ತೀವ್ರಗತಿಯಿಂದ ನಿಭಾಯಿಸಿ ಪಾಲನೆಯನ್ನು ಮಾಡಿರಿ. ಇದರಿಂದ ಆತ್ಮರಿಗೆ ಆತ್ಮಿಕ ಶಕ್ತಿಯ ಮಾರ್ಗವು ಸಿಗಲಿ, ದುಃಖದ ಅಗ್ನಿಯಲ್ಲಿ ಬೇಯುತ್ತಿರುವ ಆತ್ಮರಿಗೆ ಶೀತಲತೆಯ ಜಲವನ್ನು ತುಂಬುವ ಅನುಭವ ಮಾಡಿಸಿ, ಈ ಕರ್ತವ್ಯವನ್ನು ಮಾಡಲು ಸಾಧ್ಯವಿದೆಯೇ? ದೂರದಿಂದಲೇ ಮಾಡಬಹುದೇ? ಅಥವಾ ತಮ್ಮ ಮುಂದೆ ಬಂದಾಗಲೇ ಮಾಡುತ್ತೀರಾ? ಮಾಡುತ್ತಿದ್ದೀರಾ ಆದರೆ ಈಗ ಇನ್ನೂ ಹೇಗೆ ಏರು-ಪೇರು ಹೆಚ್ಚಾಗುತ್ತದೋ ಹಾಗೆಯೇ ತಮ್ಮ ಸೇವೆಯೂ ಸಹ ತೀವ್ರವಾಗಲಿ, ತಿಳಿಯಿತೇ? ಪೂರ್ವಜರ ಪಾಲನೆ ಏನೆಂದು ತಿಳಿಯಿತೇ? ಪೂರ್ವಜರಾಗಿದ್ದೇವೆ ಆದರೆ ಪಾಲನೆಯನ್ನು ಮಾಡಲು ಸಾಧ್ಯವಿಲ್ಲ - ಈ ರೀತಿ ಅಲ್ಲ. ಪಾಲನೆಯ ಮೂಲಕ ಶಕ್ತಿಯನ್ನು ಕೊಡುವುದು ಪೂರ್ವಜರ ಕೆಲಸವಾಗಿದೆ. ಶ್ರೇಷ್ಠ ಶಕ್ತಿಶಾಲಿ ಸ್ಥಿತಿಯ ಮೂಲಕ ಪರಿಸ್ಥಿತಿಯನ್ನು ಪಾರು ಮಾಡುವ ಶಕ್ತಿಯನ್ನು ಅನುಭವವನ್ನು ಮಾಡಿಸಿ. ಒಳ್ಳೆಯದು.

**ನಾಲ್ಕಾರು ಕಡೆಯ ಸರ್ವ ಬ್ರಹ್ಮಾರವರ ಸಹಯೋಗಿ ಆದಿ ಆತ್ಮರಿಗೆ, ಸರ್ವ ಆತ್ಮರ ಬುನಾದಿಯಾದ ಪೂರ್ವಜ ಆತ್ಮರಿಗೆ, ಸದಾ ಸರ್ವ ಆತ್ಮರ ಪ್ರತಿ ಬೇಹದ್ದಿನ ಸೇವೆಯ ಶ್ರೇಷ್ಠ ವೃತ್ತಿ ಇಡುವಂತಹ ಅತ್ಮರಿಗೆ, ಸರ್ವ ಆತ್ಮೀಯ ಸಮಾಜ ಸೇವಾಧಾರಿ ಆತ್ಮರಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

**ದಾದಿಯರೊಂದಿಗೆ ಭೇಟಿ:** ವರ್ತಮಾನ ಸಮಯ ಅಶಾಂತ ಆತ್ಮರಿಗೆ ಶಾಂತಿ ಕೊಡುವುದು  ಇದೇ ಎಲ್ಲರ ವಿಶೇಷ ಕಾರ್ಯವಾಗಿದೆ. ದಯಾಹೃದಯಿ ತಂದೆಯ ಮಕ್ಕಳಿಗೆ ಸರ್ವ ಆತ್ಮರ ಪ್ರತಿ ದಯೆ ಬರುತ್ತದೆಯಲ್ಲವೇ. ದಯಾಹೃದಯಿಯಾಗಿರುವವರು ಏನು ಮಾಡುತ್ತಾರೆ? ದಯೆಯ ಅರ್ಥವಾಗಿದೆ ಯಾವುದಾದರೊಂದು ಪ್ರಕಾರದ ಧೈರ್ಯ ಕೊಡುವುದು, ನಿರ್ಬಲ ಆತ್ಮರಿಗೆ ಬಲವನ್ನು ಕೊಡುವುದು. ಆತ್ಮರ ದುಃಖದ ಸಂಕಲ್ಪವಂತು ಮಾಸ್ಟರ್ ಸುಖದಾತಾ ಆತ್ಮರಿಗಂತು ತಲುಪುತ್ತದೆ. ಹೇಗೆ ಅಲ್ಲಿ ದುಃಖದ ಅಲೆ ಇದೆ ಹಾಗೆಯೇ ವಿಶೇಷ ಆತ್ಮರಲ್ಲಿ ಸೇವೆಯ ವಿಶೇಷ ಅಲೆಗಳು ನಡೆಯಲಿ - ಕೋಡುವುದು, ಏನಾದರು ಮಾಡುವುದು. ಏನು ಮಾಡಿದೆವು ಅದನ್ನು ಪ್ರತಿಯೊಬ್ಬರು ಸೇವೆಯ ಚಾರ್ಟ್ ಚೆಕ್ ಮಾಡಿಕೊಳ್ಳಬೇಕು. ಹೇಗೆ ಸಾಧಾರಣ ಸೇವೆಯು ನಡೆಯುತ್ತದೆ. ಅದಂತು ನಡೆಯುತ್ತದೆ. ಆದರೆ ವರ್ತಮಾನ ಸಮಯ ವಾಯುಮಂಡಲದ ಮೂಲಕ, ವೃತ್ತಿಯ ಮೂಲಕ ಸೇವೆಯ ವಿಶೇಷ ಗಮನವಿಟ್ಟುಕೊಳ್ಳಿ. ಇದರಿಂದಲೇ ಸ್ವನ ಸ್ಥಿತಿಯು ಸಹ ಸ್ವತಃ ಶಕ್ತಿಶಾಲಿಯಾಗಿಬಿಡುತ್ತದೆ. ಇಂತಹ ಅಲೆಯನ್ನು ಹರಡಿದ್ದೀರಾ? ವಿಶ್ವದ ರಾಜರಾಗುತ್ತೀರೆಂದರೆ ಸರ್ವ ಆತ್ಮರ ಪ್ರತಿ ದಯೆಯಿರಬೇಕಲ್ಲವೇ. ಯಾವುದೇ ಆತ್ಮ ವಂಚಿತರಾಗಬಾರದು. ಭಲೆ ಅನ್ಯ ಧರ್ಮದ ಅತ್ಮರಾಗಿರಲಿ ಆದರೆ ನಮ್ಮದೇ ವಂಶಾವಳಿಯಲ್ಲವೇ. ಯಾವುದೇ ಧರ್ಮದ ಆತ್ಮವಾಗಿರಲಿ ಆದರೆ ಬೇರಂತು ಒಂದೇಯಾಗಿದೆಯಲ್ಲವೆ. ಈ ಅಲೆಯಿದೆಯಲ್ಲವೇ? (ಇಲ್ಲ), ಅಟಂಷನ್ ಪ್ಲೀಸ್.

**ಅವ್ಯಕ್ತ ಬಾಪ್‌ದಾದಾರವರ್ ಪರ್ಸನಲ್ ಭೇಟಿ.**

ವ್ಯರ್ಥದ ಪ್ರಭಾವದಲ್ಲಿ ಬರುವಂತಹವರಲ್ಲ, ತನ್ನ ಶ್ರೇಷ್ಠ ಪ್ರಭಾವವನ್ನು ಬೀರುವವರು.

ಸದಾ ಪುರುಷಾರ್ಥದಲ್ಲಿ ತನ್ನನ್ನು ತಾನು ಮುಂದುವರೆಸುವ ಆತ್ಮನಾಗಿದ್ದೇನೆ - ಈ ರೀತಿ ಅನುಭವ ಮಾಡುತ್ತೀರಾ? ಪುರುಷಾರ್ಥದಲ್ಲಿಆಗಾಗ ನಿಲ್ಲುವ ಕಲೆ ಕೆಲವೊಮ್ಮೆ ಇಳಿಯುವ ಕಲೆ ಹೀಗೆ ಇರಬಾರದು. ಕೆಲವೊಮ್ಮೆ ಬಹಳ ಒಳ್ಳೆಯದಾಗಿ, ಕೆಲವೊಮ್ಮೆ ಒಳ್ಳೆಯದಾಗಿ. ಕೆಲವೊಮ್ಮೆ ಸ್ವಲ್ಪ ಒಳ್ಳೆಯದಾಗಿದೆ ಈ ರೀತಿ ಇರಬಾರದು. ಸದಾ ಬಹಳ ಒಳ್ಳೆಯದಾಗಿರಬೇಕು. ಏಕೆಂದರೆ ಸಮಯ ಕಡಿಮೆ ಇದೆ ಹಾಗೂ ಸಂಪೂರ್ಣವಾಗುವ ಗುರಿ ಶ್ರೇಷ್ಠವಾಗಿದೆ ಹಾಗಾದರೆ ನಿಮ್ಮ ಪುರುಷಾರ್ಥದ ಗತಿಯು ತೀವ್ರವಾಗಿರಬೇಕು. ಪುರುಷಾರ್ಥದ ತೀವ್ರಗತಿಯ ಚಿಹ್ನೆಯಾಗಿದೆ ಅವರು ಸದಾ ಡಬಲ್ ಲೈಟ್ ಇರುತ್ತಾರೆ. ಯಾವುದೇ ಪ್ರಕಾರದ ಹೊರೆಯ ಅನುಭವ ಮಾಡುವುದಿಲ್ಲ. ಪ್ರಕೃತಿಯಿಂದಾಗಲಿ ಯಾವುದೇ ಪರಿಸ್ಥಿತಿ ಬರಲಿ. ವ್ಯಕ್ತಿಗಳಿಂದ ಯಾವುದೇ ಪರಿಸ್ಥಿತಿ ಬರಲಿ ಆದರೆ ಪ್ರತಿ ಪರಿಸ್ಥಿತಿಯಲ್ಲಿ, ಸ್ವಯಂ ಸ್ಥಿತಿಯ ಮುಂದೆ ಯಾವುದು ಅನುಭವವಾಗುವುದಿಲ್ಲ. ಸ್ವ ಸ್ಥಿತಿಯ ಚಿಹ್ನೆ ಪರಿಸ್ಥಿತಿಗಿಂತ ಬಹಳ ಶ್ರೇಷ್ಠವಾಗಿದೆ ಏಕೆ? ಇದು ಸ್ವ ಆಗಿದೆ ಅದು ಪರ ಆಗಿದೆ. ತನ್ನ ಶಕ್ತಿಯನ್ನು ಮರೆತು ಹೋಗುತ್ತೀರಿ ಆಗಲೆ ಪರಿಸ್ಥಿತಿ ದೊಡ್ಡದು ಎನಿಸುತ್ತದೆ. ಸದಾ ಡಬಲ್ ಲೈಟ್ ನ ಅರ್ಥವೇ ಆಗಿದೆ ಲೈಟ್ ಅರ್ಥಾತ್ ಶ್ರೇಷ್ಠವಾಗಿರುವುದು. ಹಗುರವಾಗಿರುವವರು ಸದಾ ಶ್ರೇಷ್ಠದಲ್ಲಿ ಹೋಗುತ್ತಾರೆ. ಹೊರೆಯಿರುವವರು ಸದಾ ಕೆಳಗಿಳಿಯುತ್ತಾರೆ. ಅರ್ಧ ಕಲ್ಪವಂತೂ ಕೆಳಗೆ ಇಳಿಯುತ್ತಲೇ ಬಂದಿದ್ದೀರಿ ಅಲ್ಲವೇ.

ಶರೀರದಲ್ಲೂ ಸಹ ನೋಡಿ ಆತ್ಮದ ನಿವಾಸ ಸ್ಥಾನ ಶ್ರೇಷ್ಠಾತಿ ಶ್ರೇಷ್ಠವಾಗಿದೆ ಕಾಲುಗಳಲ್ಲಂತೂ ಇಲ್ಲವಲ್ಲ. ಹೇಗೆ ಶರೀರದಲ್ಲಿ ಅತ್ಮದ ಸ್ಥಾನ ಶ್ರೇಷ್ಠವಾಗಿದೆ ಹಾಗೆ ಸ್ಥಿತಿಯೂ ಶ್ರೇಷ್ಠವಾಗಿರಲಿ. ಬ್ರಾಹ್ಮಣರ ಚಿಹ್ನೆಯನ್ನು ಶ್ರೇಷ್ಠ ಶಿಖೆಯಲ್ಲಿ ತೋರಿಸುತ್ತಾರೆ. ಶಿಖೆಯ ಅರ್ಥವೇ ಆಗಿದೆ ಶ್ರೇಷ್ಠತೆ ಹಾಗಾದರೆ ಸ್ಥೂಲ ಚಿಹ್ನೆಯನ್ನು ಶ್ರೇಷ್ಠ ಸ್ಥಿತಿಯ ಕಾರಣದಿಂದ ತೋರಿಸಿದ್ದಾರೆ. ಶೂದ್ರರನ್ನು ಕೆಳಗೆ ತೋರಿಸಿದ್ದಾರೆ. ಬ್ರಾಹ್ಮಣರನ್ನು ಮೇಲೆ ತೋರಿಸಿದ್ದಾರೆ ಹಾಗಾದರೆ ಬ್ರಾಹ್ಮಣರ ಜ್ಞಾನ ಹಾಗೂ ಸ್ಥಿತಿ ಎರಡೂ ಶ್ರೇಷ್ಠವಾಗಿದೆ. ಒಂದು ವೇಳೆ ಸ್ಥಾನದ ನೆನಪಿದ್ದರೆ  ಶ್ರೇಷ್ಠವಾಗಿದೆ. ಬ್ರಾಹ್ಮಣರ ದೃಷ್ಟಿಯೂ ಸದಾ ಮೇಲಿರುತ್ತದೆ ಏಕೆಂದರೆ ಅತ್ಮವನ್ನು ನೋಡುತ್ತದೆ. ಆತ್ಮ ಮೇಲಿರುತ್ತದೆ. ಎಂದ ಮೇಲೆ ದೃಷ್ಟಿಯು ಮೇಲೆ ಹೋಗುತ್ತದೆ. ಯಾವಾಗಲೇ ಯಾರನ್ನೇ ನೋಡುತ್ತೀರಿ ಅಥವಾ ಮಾತನಾಡುತ್ತೀರಿ ಎಂದರೆ ಆತ್ಮನನ್ನು ನೋಡಿ ಮಾತನಾಡುತ್ತೀರಿ. ಆತ್ಮನ ಜೊತೆ ಮಾತನಾಡುತ್ತೀರಿ. ನಿಮ್ಮ ದೃಷ್ಟಿ ಅತ್ಮನ ಕಡೆಗೆ ಹೋಗುತ್ತದೆ.  ಆತ್ಮ ಮಸ್ತಕದಲ್ಲಿದೆಯಲ್ಲವೆ!! ಎಂದ ಮೇಲೆ ಶ್ರೇಷ್ಠ ಸ್ಥಿತಿಯಲ್ಲಿ ಸ್ಥಿತರಾಗುವುದು ಸಹಜವಾಗಿದೆ.

ಯಾವಾಗ ಇಂತಹ ಸ್ಥಿತಿ ಆಗುತ್ತದೆಯೋ ಆಗ ಕೆಳಗಿನ ಮಾತುಗಳಿಂದ, ವಾಯುಮಂಡಲದಿಂದ ಸದಾ ದೂರವಾಗಿ ಬಿಡುವಿರಿ. ಅದರ ಪ್ರಭಾವದಲ್ಲಿ ಬರುವುದಿಲ್ಲ. ಒಳ್ಳೆಯ ಪ್ರಭಾವ ಬೀರುತ್ತದೆಯೊ ಅಥವಾ ಕೆಟ್ಟ ಪ್ರಭಾವ ಬೀರುತ್ತದೆಯೋ. ಒಂದು ವೇಳೆ ಪ್ರವೃತ್ತಿಯಲ್ಲಿ ಕೆಟ್ಟ ವಾಯುಮಂಡಲವಿದ್ದರೆ, ಆಗ ಏನು ಮಾಡುತ್ತೀರಿ? ಪ್ರಭಾವಿತರಾಗುತ್ತೀರಾ? ಕೆಟ್ಟದ್ದನ್ನು ಒಳ್ಳೆಯದನ್ನಾಗಿ ಮಾಡುವವರಾಗಿದ್ದೀರಾ ಅಥವಾ ಪ್ರಭಾವದಲ್ಲಿ ಬರುವವರಾಗಿದ್ದೀರಾ? ಏಕೆಂದರೆ ಮಾಯೆಯು ನೋಡುತ್ತಿರುತ್ತದೆ ಚೆನ್ನಾಗಿ ಬೆರಳನ್ನು ಹಿಡಿದುಕೊಂಡು ಬಿಡುತ್ತದೆ. ಬೆರಳಿನ ನಂತರ ಕೈಯನ್ನು ಹಿಡಿದುಕೊಳ್ಳುತ್ತದೆ. ಕೈಯನ ನಂತರ ಕಾಲನ್ನು ಹಿಡಿದುಕೊಳ್ಳುತ್ತದೆ. ಆದ್ದರಿಂದ ಪ್ರಭಾವದಲ್ಲಿ ಬರಬೇಡಿ. ಪ್ರಭಾವದಲ್ಲಿ ಬರುವವರಲ್ಲ, ಶ್ರೇಷ್ಠ ಪ್ರಭಾವ ಬೀರುವವರು ಆದರೆ ಬ್ರಾಹ್ಮಣ ಆತ್ಮ ಅರ್ಥಾತ್ ಸದಾ ಡಬಲ್ ಲೈಟ್, ಶ್ರೇಷ್ಠರಾಗಿರುವವರು. ಇದೇ ಕೃತಿಯಲ್ಲಿ ಮುಂದುವರೆಯುತ್ತಾ ಹೋಗಿ. ಒಳ್ಳೆಯದು.

ಎಲ್ಲರೂ ಖುಷಿಯಾಗಿರುತ್ತೀರಲ್ಲವೇ? ದುಃಖದ ಅಲೆ ಬರುವುದಿಲ್ಲವಲ್ಲ? ಏಕೆಂದರೆ ಯಾರು ದುಃಖಧಾಮವನ್ನು ಬಿಟ್ಟು ಹೋಗುತ್ತಿದ್ದಾರೆಯೋ ಅವರ ಬಳಿ ದುಃಖದ ಅಲೆ ಬರಲು ಹೇಗೆ ಸಾಧ್ಯ. ಸಂಗಮದಲ್ಲಿ ದುಃಖಧಾಮ ಹಾಗೂ ಸುಖಧಾಮ ಎರಡರ ಜ್ಞಾನವಿದೆ. ಎರಡರ ನಾಲೆಜ್ ಫುಲ್ ಶಕ್ತಿಶಾಲಿ ಆತ್ಮರಾಗಿದ್ದೀರಿ. ಅಪ್ಪಿತಪ್ಪಿಯೂ ದುಃಖಧಾಮದಲ್ಲಿ ಹೋಗುವಂತಿಲ್ಲ. ಸದಾ ಖುಷಿಯಾಗಿರುವಂತಹವರ ಹತ್ತಿರ ದುಃಖದ ಅಲೆ ಎಂದಿಗೂ ಬರಲು ಸಾಧ್ಯವಿಲ್ಲ. ಒಳ್ಳೆಯದು ಸೇವೆ ಹಾಗೂ ಸ್ವ ಉನ್ನತಿ ಎರಡರ ಬ್ಯಾಲೆನ್ಸ್ ಇಡಿ. ಸೇವೆಯಲ್ಲಿ ಮಸ್ತರಾಗಿ ಸ್ವ ಉನ್ನತಿ ಮರೆಯಬೇಡಿ. ಸೇವೆಯ ಆಸಕ್ತಿ ಜಾಸ್ತಿಯಿದೆ ಆದರೆ ಎರಡರ ಬ್ಯಾಲೆನ್ಸ್ ಇರಬೇಕು. ತಿಳಿಯಿತೇ? ಚೆನ್ನಾಗಿ ನಡೆಯುತ್ತಿದ್ದಿರಿ ಆದರೆ ಚೆನ್ನಾಗಿರುವವರೆಗೆ ಉಳಿದುಕೊಂಡು ಬಿಡಬೇಡಿ. ಇನ್ನು ಒಳ್ಳೆಯದಕ್ಕಿಂತ ಒಳ್ಳೆಯವರಾಗಿರಿ.

ರಿವೈಸ್ ಕೋರ್ಸ್ 10-12-1992.

*ಪೂರ್ವಜರು ಮತ್ತು ಪೂಜ್ಯರು ಎಂಬ ಸ್ಮೃತಿಯಲ್ಲಿದ್ದು ಸರ್ವರ ಅಲೌಕಿಕ ಪಾಲನೆಯನ್ನು ಮಾಡಿರಿ.*

ಪೂರ್ವಜ ಆತ್ಮರಾದ ತಮ್ಮ ಪಾಲನೆಯ ವಿಧಿ ಏನಾಗಿದೆ? ಸ್ವಯಂನಲ್ಲಿ ತಂದೆಯ ಮೂಲಕ ಪ್ರಾಪ್ತಿಯಾದ ಸರ್ವ ಶಕ್ತಿಗಳನ್ನು ಅನ್ಯ ಆತ್ಮರಲ್ಲಿ ತುಂಬುವುದಾಗಿದೆ. ಸ್ವಯಂನಲ್ಲಿ ಸರ್ವಶಕ್ತಿಗಳನ್ನು ತುಂಬುವುದು ಮತ್ತು ಯಾವ ಆತ್ಮನಿಗೆ, ಯಾವ ಶಕ್ತಿಯ ಅವಶ್ಯಕತೆ, ಯಾವ ಸಮಯದಲ್ಲಿ ಇದೆಯೋ ಅವರಿಗೆ ಆ ಸಮಯ ಆ ಶಕ್ತಿಯ ಮೂಲಕ ಪಾಲನೆಯನ್ನು ಮಾಡುವುದು. ಈ ರೀತಿ ಪಾಲನೆ ಮಾಡಲು ಬರುತ್ತಿದೆಯೇ? ಕೇವಲ ಸೆಂಟರನ್ನೆ ಪಾಲನೆ ಮಾಡುತ್ತಿದ್ದೀರೋ ಅಥವಾ ಇಡೀ ವಿಶ್ವದ ಆತ್ಮರನ್ನು ಪಾಲನೆ ಮಾಡುತ್ತಿದ್ದೀರಾ? ಕೇವಲ ಪ್ರವೃತ್ತಿಯನ್ನು ಕುಟುಂಬದವರನ್ನು ಪಾಲನೆ ಮಾಡುತ್ತಿರೋ ಅಥವಾ ವಿಶ್ವವನ್ನೇ ಪಾಲನೆ ಮಾಡುತ್ತಿರೋ? ವರ್ತಮಾನ ಸಮಯ ಪೂರ್ವಜ ಆತ್ಮರಾದ ತಮ್ಮ ಪಾಲನೆಯ ಅವಶ್ಯಕತೆಯೇ ಸರ್ವಾತ್ಮರಿಗೆ ಇದೆ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ವಿಶ್ವ ರಚಯಿತನಾದ ತಂದೆಯ ಡೈರೆಕ್ಟರ್ ಶ್ರೇಷ್ಠ ರಚನೆಯಾಗಿದ್ದೇನೆ.

2. ಈ ವಿಶ್ವದ ಪೂರ್ವಜ ಮತ್ತು ಪೂಜ್ಯ ಆತ್ಮನಾದ ನಾನು ಧರ್ಮಪಿತರಿಗೂ ಸಂದೇಶವನ್ನು ತಿಳಿಸಿದ್ದೇನೆ.

3. ತಂದೆಯ ಕಾರ್ಯದಲ್ಲಿ ಸಹಯೋಗಿಯಾದ ನಾನು ವಿಧಿಪೂರ್ವಕವಾದ ಪೂಜೆ ಮತ್ತು ಕೀರ್ತನೆಯಿಂದ ಮಹಿಮೆ ಅಥವಾ ಗಾಯನ ಯೋಗ್ಯವಾಗಿ ತಯಾರಾಗಿರುವ ಪೂಜ್ಯ ಸ್ವರೂಪ.

4. ನಾನು ಅನಾದಿ ರೂಪದಲ್ಲಿ ಕೂಡ ಪರಮಾತ್ಮನಿಗೆ ಅತಿ ಸಮೀಪವಾಗಿ ಇದ್ದೇನೆ.

5. ನಾನು ಬೇಹದ್ ದೃಷ್ಟಿಯಿಂದ ಸರ್ವಾತ್ಮರ ಪಾಲನೆಯನ್ನು ಮಾಡುತ್ತಿದ್ದೇನೆ.

6. ನಾನು ಭೋಜನದ ಮೂಲಕ ಶರೀರವನ್ನು ಮತ್ತು ಯಾರಿಗೆ ಯಾವ ಸಮಯದಲ್ಲಿ ಯಾವ ಶಕ್ತಿಯ ಅವಶ್ಯಕತೆ ಇದೆಯೋ ಆ ಶಕ್ತಿಯ ಮೂಲಕ ಆತ್ಮನನ್ನು ಶಕ್ತಿಶಾಲಿಯಾಗಿ ಮಾಡಿ ಸರ್ವಾತ್ಮರ ಪಾಲನೆಯನ್ನು ಮಾಡಿರುವ ಪೂರ್ವಜ ಸ್ವರೂಪ.

7. ನಾನು ಅಶಾಂತಿಯ ಸಮಯದಲ್ಲಿ ನನ್ನ ಪೂರ್ವಜ ಸ್ಥಿತಿಯನ್ನು ಜಾಗೃತಗೊಳಿಸಿ ಸೆಕೆಂಡಿನಲ್ಲಿ ಸೇವೆಗಾಗಿ ಸಿದ್ಧವಾಗಿ ವಿಶ್ವಾತ್ಮರಿಗೆ ಮತ್ತು ಪ್ರಕೃತಿಗೆ ವಿಶೇಷ ಶಾಂತಿಯನ್ನು ನೀಡುವ ಸೇವೆಯನ್ನು ಮಾಡುವ ಆತ್ಮಿಕ ಸಮಾಜ ಸೇವಕನು.

8. ನಾನು ಎಂತಹ ಏರುಪೇರಿನ ಸಮಯದಲ್ಲಾದರೂ  ಲೈಟ್ ಹೌಸ್ ಮೈಟ್ ಹೌಸ್ಆಗಿ ವಿಶೇಷ ಶಾಂತಿಯ ಮತ್ತು ಸಹನ ಶಕ್ತಿಯ ಧೈರ್ಯವನ್ನು  ಎಲ್ಲರಿಗೂ ತುಂಬಿದ್ದೇನೆ.

9. ನಾನು ದುಃಖದ ಅಗ್ನಿಯಲ್ಲಿ ಬೇಯುತ್ತಿರುವ ಆತ್ಮರಿಗೆ ಶೀತಲತೆಯ ಜಲವನ್ನು ತುಂಬುವ ಅನುಭವ ಮಾಡಿಸಿದ್ದೇನೆ.